ಒಟ್ಟಿನಲ್ಲಿ ಈ ಊರಿನ ಮತ್ತು ಅಕ್ಕಪಕ್ಕದ ಊರುಗಳಲ್ಲಿ ಒಂದೇ ವದಂತಿ ಹಬ್ಬಿತ್ತು. ರಾತ್ರಿ ಹೊತ್ತಿನಲ್ಲಿ ಸಂಚಾರ ಮಾಡಿದವರು ಬದುಕುಳಿಯುವುದಿಲ್ಲವಂತೆ ಎಂಬ ಪ್ರತೀತಿ ಬೇರೂರಿದ್ದರಿಂದ ಎಲ್ಲರೂ ಸಂಜೆಯ ಮೊದಲೇ ಮನೆ ಸೇರುತ್ತಿದ್ದರು. ದೂರದೂರಿನಲ್ಲಿ ಕೆಲಸ ಮಾಡುತ್ತಿದ್ದವರು ಮತ್ತು ಪೇಟೆಗೆ ಹತ್ತಿರದವರು ಸಾಧಾರಣ ಎಂಟು ಗಂಟೆಯ ಒಳಗೆ ಮನೆಯಂಗಳ ತಲುಪುತ್ತಿದ್ದರು. ನಂತರ ಅಪರೂಪಕ್ಕೊಮ್ಮೆ ದೂರದ ಬಸ್ಸು, ಲಾರಿಗಳಷ್ಟೇ ಸಂಚರಿಸುತ್ತಿದ್ದವು.

ಸಾಕಷ್ಟು ತಯಾರಿ ಮಾಡಿಕೊಂಡು ಒಂದು ದಿನ ಪ್ರದೀಪ ಈ ದೆವ್ವದೂರಿಗೆ ಹೊರಟ. ಕೆಟ್ಟ ರಸ್ತೆಯಲ್ಲಿ ಹೊರಳುತ್ತಾ ಸಾಗಿದ ಬಸ್ಸು ತಲುಪುವಾಗ ಕತ್ತಲಾವರಿಸಿತ್ತು. ಪೇಟೆ ತೀರಾ ಸಪ್ಪೆಯಾಗಿ ಕಂಡಿತು ಅವನಿಗೆ. ಆಗಂತುಕನೊಬ್ಬನ ಪ್ರವೇಶವಾಗುತ್ತಿದ್ದಂತೆಯೇ ಹಲವು ಜೋಡಿ ಕಣ್ಣುಗಳು ಅವನನ್ನು ಪರೀಕ್ಷಿಸಿದವು. ಜನರು ಮನೆ ಸೇರುವ ತವಕದಲ್ಲಿ, ಗಡಿಬಿಡಿಯಲ್ಲಿದ್ದರು.

ಅಂಗಡಿಯೊಂದರಿಂದ ಸಿಗರೇಟ್ ಪಡೆದು ಹಚ್ಚಿ, ಹೊಗೆ ಬಿಡುತ್ತಾ ಅಲ್ಲಿನ ವಾತಾವರಣವನ್ನೊಮ್ಮೆ ಪರಿಶೀಲಿಸಿದ ಪ್ರದೀಪ. ಅಂಗಡಿಯಾತನ ಬಳಿ ಲೋಕಾಭಿರಾಮವಾಗಿ ಮಾತನಾಡಿ ಕೆಲ ಮಾಹಿತಿ ಸಂಗ್ರಹಿಸಿದ. ಈತನ್ಯಾರೋ ಸಿಐಡಿ ಅಧಿಕಾರಿಯಾಗಿರಬಹುದೇ ಎಂಬ ಅನುಮಾನ ಕೆಲವರಿಗೆ ಮೂಡಿತು. ಪಕ್ಕದಲ್ಲಿಯೇ ಇದ್ದ ಹೋಟೆಲನ್ನು ಪ್ರವೇಶಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಾ ಸಾಕಷ್ಟು ಹೊತ್ತು ಆತ ಅಲ್ಲಿಯೇ ಕುಳಿತಿದ್ದು ಹಲವರ ಅನುಮಾನ ಹೆಚ್ಚಿಸಿತು. ಆತನ ಚಹರೆಯಲ್ಲಿಯೇ ಆತ ಏನನ್ನೋ ಹುಡುಕುತ್ತಿರುವುದನ್ನು ಕೆಲವರು ಅರ್ಥೈಸಿಕೊಂಡರು.

ಹೊರಗೆ ಬಂದು ಮತ್ತೊಂದೆರಡು ಸಿಗರೇಟ್ ಎಳೆದುಕೊಂಡ. ಹಾದು ಹೋಗುತ್ತಿದ್ದವರನ್ನು ಸ್ಮಶಾನ ಎಲ್ಲೆಂದು ವಿಚಾರಿಸಿದ. ಎಲ್ಲಾ ಅಂಗಡಿಗಳು ಮುಚ್ಚಲ್ಪಡುತ್ತಿದ್ದರೂ ಅಲ್ಲಿದ್ದ ವೈನ್‌ಶಾಪ್‌ನಲ್ಲಿ ಮಾತ್ರ ಚಟುವಟಿಕೆ ಗರಿಗೆದರಿತ್ತು. ಪ್ರದೀಪನಿಗೆ ಅದೇ ಆಹ್ವಾನವಾಯಿತು. ದುಬಾರಿ ವಿಸ್ಕಿಯನ್ನು ಆತ ಸೇವಿಸುತ್ತಿದ್ದುದನ್ನು ಒಂದಿಬ್ಬರು ತೀಕ್ಷ್ಣವಾಗಿ ಗಮನಿಸುತ್ತಿದ್ದರು. ಗಲ್ಲಾದಲ್ಲಿ ಕುಳಿತಿದ್ದವನಂತೂ ಯಾರ ಮನೆಗೆ ಬಂದಿದ್ದೀಯೆಂದು ಪ್ರದೀಪನನ್ನು ಕೇಳಿಯೇ ಬಿಟ್ಟ.

ಯಾವುದೋ ಒಂದು ಹಾರಿಕೆಯ ಉತ್ತರ ಕೊಟ್ಟ ಪ್ರದೀಪ. ನಿಜಕ್ಕೂ ಆತ ಯಾರ ಮನೆಗೂ ಹೋಗಲು ಬಂದಿರಲಿಲ್ಲ. ಆತನಿಗೆ ಸಮಯ ಕಳೆದರೆ ಸಾಕಾಗಿತ್ತು. ಉಳಕೊಳ್ಳಲು ಲಾಡ್ಜ್ ಇಲ್ಲದ್ದರಿಂದ ಆತನಿಗೆ ನಿರಾಶೆಯೇ ಆಗಿತ್ತು. ನಗರದಲ್ಲಿಯಾದರೆ ರೂಮ್ ಮಾಡಿ ಯಾರಿಗೂ ಗೊತ್ತಾಗದಂತೆ ಕೆಲಸ ಮಾಡಿ ಮುಗಿಸಬಹುದಿತ್ತು. ಈ ಹಳ್ಳಿಯಲ್ಲಿ ಪರಿಸ್ಥಿತಿ ತೀರಾ ಕಷ್ಟಕರವೆಂಬುದನ್ನು ಆಗಲೇ ಅವನು ಕಂಡುಕೊಂಡಿದ್ದ. ಬಸ್ಸು ತಂಗುದಾಣ ದನಗಳು ನಿಲ್ಲಲು ಲಾಯಕ್ಕಾಗಿತ್ತು. ಬೀದಿನಾಯಿಗಳು ಅದಾಗಲೇ ಅದನ್ನಾಕ್ರಮಿಸಿ ಆಗಿತ್ತು.

ತನ್ನ ಮಿತ್ರನೊಬ್ಬ ಬಸ್ಸಿನಲ್ಲಿ ಬರುವವನಿದ್ದು ಅವರ ನೆಂಟರ ಮನೆಗೆ ಹೋಗುವವನಿದ್ದೇನೆ ಎಂದು ಏನೇನೋ ಹೇಳಿದ ಪ್ರದೀಪ. ಕುಳಿತುಕೊಳ್ಳಲು ಒಂದು ಅಂಗಡಿ ಜಗಲಿಯಲ್ಲಿ ಸ್ಥಳ ಮಾಡಿಕೊಂಡು, ಜನರೆಲ್ಲಾ ಖಾಲಿಯಾಗುವವರೆಗೆ ಸಿಗರೇಟ್ ಬೂದಿ ಮಾಡುತ್ತಾ ಕುಳಿತನಾತ. ಊರಿಗೆ ಪ್ರವೇಶಿಸಿರುವ ಈ ಆಗಂತುಕನ ಬಗ್ಗೆ ಆಗಲೇ ಕೆಲವರು ಗುಟ್ಟಾಗಿ ಚರ್ಚಿಸುತ್ತಿದ್ದರು.

ಜನ ಖಾಲಿಯಾದ ಆ ನಿರ್ಜನ ಊರಿನ ಪೇಟೆಯಲ್ಲಿ ಕುಳಿತಿದ್ದ ಪ್ರದೀಪನಿಗೆ ತೂಕಡಿಕೆ ಬರುತ್ತಿತ್ತು. ಸೊಳ್ಳೆ, ಕೀಟಗಳು ಬಾಧಿಸುತ್ತಿದ್ದವು. ಎಲ್ಲಿ ಏನು ಎತ್ತ ಏನೂ ತಿಳಿದಿಲ್ಲ. ಅಷ್ಟರಲ್ಲಿ ಹನ್ನೊಂದು ಗಂಟೆ ದಾಟಿತ್ತು.